# ಸ್ತ್ರೀದ್ವೇಷ... ಅದೂ ಇದೂ...
# ಒಪ್ಪಲ್ಲಂತೆ ರಶ್ಮಿಕಾ



‘ಅನಿಮಲ್’ ಹಿಂದಿ ಸಿನಿಮಾ ತೆರೆಕಂಡು ನಾಲ್ಕು ತಿಂಗಳಾದವು. ಈಗಲೂ ಆ ಚಿತ್ರದಲ್ಲಿನ ಸ್ತ್ರೀದ್ವೇಷದ ಕುರಿತು ಪದೇ ಪದೇ ಮಾತು ಕೇಳಿಬರುತ್ತಲೇ ಇದೆ. ನಟಿ ನೇಹಾ ಧುಪಿಯಾ ನಡೆಸಿಕೊಡುವ ಪೋಡ್‌ಕಾಸ್ಟ್‌ನಲ್ಲಿಯೂ ಇದೇ ಚರ್ಚೆ ನಡೆಯಿತು. ಈ ಸಲ ಸಂವಾದಕ್ಕೆ ಮುಖಾಮುಖಿಯಾಗಿದ್ದು ಚಿತ್ರದ ನಾಯಕಿ ರಶ್ಮಿಕಾ ಮಂದಣ್ಣ.

ಇದುವರೆಗೆ ಆ ಸಿನಿಮಾದ ಟೀಕೆಗಳ ಬಗೆಗೆ ರಶ್ಮಿಕಾ ಮಾತನಾಡಿದ್ದು ಕಡಿಮೆಯೇ. ನಿರ್ದೇಶಕ ಸಂದೀಪ್ ರೆಡ್ಡಿ ವಂಗಾ ಎಲ್ಲರಿಗೂ ತಾವೇ ಉತ್ತರ ಕೊಡುತ್ತಾ ಬಂದಿದ್ದರು.

‘ಇದೊಂದು ಕಚ್ಚಾ, ನೇರ, ಸರಿಯಾದ ಸಿನಿಮಾ. ಚಿತ್ರದ ಕೇಂದ್ರ ಪಾತ್ರದ ತಲೆಯಲ್ಲಿ ತಂದೆಯೇ ತುಂಬಿಕೊಂಡಿರುತ್ತಾನೆ. ಅಪ್ಪನಿಗಾಗಿ ಯಾವ ಮಟ್ಟಕ್ಕೆ ಬೇಕಾದರೂ ಅವನು ಹೋಗುತ್ತಾನೆ. ಈ ದೃಷ್ಟಿಯಲ್ಲಿಯೇ ಇಡೀ ಸಿನಿಮಾದ ಎಲ್ಲ ದೃಶ್ಯಗಳನ್ನೂ ಬರೆದಿದ್ದಾರೆ. ಚಿತ್ರೀಕರಣ ನಡೆಯುವಾಗ ನನಗೆ ಅನಿಸಿದ್ದು ಇಷ್ಟೆ. ಒಂದು ಚಿತ್ರ ನಮ್ಮನ್ನು ರಂಜಿಸಿದರೆ, ಸುಮ್ಮನಿದ್ದುಬಿಡಬೇಕು. ಆಸ್ವಾದಿಸಿಕೊಂಡು ಖುಷಿಯಿಂದ ಹೋಗಬೇಕು. ಸ್ತ್ರೀದ್ವೇಷ, ಅದೂ ಇದೂ ಎನ್ನುವುದನ್ನು ನಾನು ಒಪ್ಪುವುದಿಲ್ಲ’ ಎಂಬರ್ಥದಲ್ಲಿ ರಶ್ಮಿಕಾ ಮಾತನಾಡಿದರು.

‘ಅನಿಮಲ್’ ಸಿನಿಮಾದ ಒಂದು ದೃಶ್ಯದಲ್ಲಿ ರಶ್ಮಿಕಾ ಹಲ್ಲುಮುಡಿ ಕಚ್ಚಿ ಮಾತನಾಡುತ್ತಾರೆ. ಟ್ರೈಲರ್ ಬಿಡುಗಡೆಯಾದಾಗಲೇ ಈ ದೃಶ್ಯವನ್ನು ಅನೇಕರು ಟ್ರೋಲ್ ಮಾಡಿದ್ದರು. ಸಿನಿಮಾ ತೆರೆಕಂಡ ಮೇಲೆ ಇದನ್ನೇ ಇಟ್ಟುಕೊಂಡು ಅಸಂಖ್ಯ ರೀಲ್ಸ್, ಮೀಮ್ಸ್ ಬಂದವು.

‘ಆ ದೃಶ್ಯದ ಚಿತ್ರೀಕರಣ ನಡೆದಾಗ, ಸೆಟ್‌ನಲ್ಲಿ ಇದ್ದ ಎಲ್ಲರೂ ನನ್ನ ಅಭಿನಯವನ್ನು ಮೆಚ್ಚಿಕೊಂಡಿದ್ದರು. ಭಾವತೀವ್ರತೆಯನ್ನು ಹಾಗೆ ಅಭಿವ್ಯಕ್ತಿಸಬೇಕು ಎನ್ನುವುದು ನಿರ್ದೇಶಕರ ಬಯಕೆಯಾಗಿತ್ತು. ನಾನು ಅದನ್ನು ಅಂದುಕೊಂಡಂತೆ ನಿರ್ವಹಿಸಿದೆ ಎನ್ನುವುದು ಸತ್ಯ. ಟ್ರೋಲ್‌ಗಳು ಬಂದವು. ಯಾರನ್ನೇ ಆಗಲಿ, ಟೀಕಿಸುವಾಗ ದೇಹದ ಅಂಗಗಳನ್ನು ಉಲ್ಲೇಖಿಸಿ ಮಾತನಾಡುವುದು ಸರಿಯಲ್ಲ. ಬೇಕಿದ್ದರೆ, ಸಂಭಾಷಣೆ ಸರಿಯಾಗಿ ಹೇಳಿಲ್ಲ ಎನ್ನಲಿ. ಇನ್ನೂ ಚೆನ್ನಾಗಿ ಅಭಿನಯಿಸಬೇಕಿತ್ತು ಎಂದೂ ಟೀಕಿಸಲಿ’ — ಇದು ಟೀಕಾಕಾರರಿಗೆ ರಶ್ಮಿಕಾ ಪ್ರತಿಕ್ರಿಯೆ.

ತೆಲುಗಿನ ‘ಪುಷ್ಪಾ’ ಸಿನಿಮಾದ ಎರಡನೇ ಭಾಗದ ಚಿತ್ರೀಕರಣವನ್ನು ರಶ್ಮಿಕಾ ಈಗಾಗಲೇ ಮುಗಿಸಿದ್ದಾರೆ. ಇನ್ನೂ ಎರಡು ತೆಲುಗು ಹಾಗೂ ಒಂದು ಹಿಂದಿ ಸಿನಿಮಾದಲ್ಲಿ ಕೆಲಸ ಮಾಡಲು ಸಹಿ ಹಾಕಿ ಆಗಿದೆ. ಹೀಗಾಗಿ, ಅವರು ಈಗಲೂ ಬಿಡುವಿಲ್ಲದ ನಟಿ. ■



# ಸೋನು ನೆನಪಿನ ಎರಡು ಹನಿಗಳು

ಕಳೆದ ವರ್ಷದ ಕೊನೆಯಲ್ಲಿ ರಣವೀರ್ ಅಲಹಾಬಾದಿಯಾ ಯೂಟ್ಯೂಬ್ ಚಾನಲ್‌ಗೆ ಸೋನು ನಿಗಮ್ ಸಂದರ್ಶನ ನೀಡಿದ್ದರು. ಪ್ರಾಯದಲ್ಲಿ ಅವಕಾಶಕ್ಕಾಗಿ ತಾವು ಪಟ್ಟ ಕಷ್ಟಗಳನ್ನು ಅವರು ಭಾವುಕರಾಗಿ ನೆನಪಿಸಿಕೊಂಡಿದ್ದರು. ಆ ನೆನಪಿನ ಎರಡು ತುಣುಕುಗಳು ಈಗ ವೈರಲ್ ಆಗಿವೆ.

ತುಣುಕು ಒಂದು: ಸ್ವರ ಸಂಯೋಜಕ ಅನು ಮಲ್ಲಿಕ್ ಅವರಲ್ಲಿ ಸೋನು ಅವಕಾಶ ಕೇಳಿಕೊಂಡಿದ್ದರು. ಹೇಗೋ ನಂಬರ್ ಪತ್ತೆ ಮಾಡಿ, ಫೋನ್ ಮಾಡುತ್ತಿದ್ದರು. ಒಮ್ಮೆ ಫೋನ್ ಮಾಡಿದಾಗ ಅತ್ತಲಿಂದ ಉತ್ತರ ಹೀಗೆ ಬಂತು — ‘ನಾನು ಅಬು ಮಾತಾಡ್ತಾ ಇದೀನಿ, ಅನು ಅಲ್ಲ.’ ಅದು ಅನು ಮಲ್ಲಿಕ್ ಎನ್ನುವುದು ಸೋನು ಅವರಿಗೂ ಗೊತ್ತಿತ್ತು. ಆದರೂ ತಪ್ಪಿಸಿಕೊಳ್ಳಲು ಅನು ಹಾಗೆ ನಾಟಕವಾಡುತ್ತಿದ್ದರು. ಬದುಕಿನಲ್ಲಿ ಇವೆಲ್ಲ ಅನಿವಾರ್ಯ. ಸರಿಯಾದ ಸಮಯ ಬರುವವರೆಗೆ ಕಾಯಬೇಕು ಎಂದು ಆಗ ಸೋನು ಮನಸ್ಸಿನಲ್ಲಿಯೇ ಅಂದುಕೊಂಡರು.

ತುಣುಕು ಎರಡು: ಮುಂಬೈನ ಉಷಾ ಸ್ಟುಡಿಯೊಗೆ ಆಡಿಷನ್‌ಗಾಗಿ ಬರಲು ಹೇಳಿದ್ದರು. ಆಗಿನ್ನೂ ಸೋನು ಹದಿನೆಂಟರ ಹುಡುಗ. ಸ್ಟುಡಿಯೊದಲ್ಲಿ ಅಲ್ಕಾ ಯಾಜ್ಞಿಕ್ ಹಾಗೂ ಕುಮಾರ್ ಸಾನು ಹಾಡಿನ ಧ್ವನಿಮುದ್ರಣ ನಡೆಯುತ್ತಿತ್ತು. ಅವರು ಒಳಗೆ ಹೋಗುವುದು, ಹೊರಗೆ ಬರುವುದು ನಡೆದೇ ಇತ್ತು. ಆ ಸ್ಟುಡಿಯೊಗೆ ಹೇಳಿದ ಸಮಯಕ್ಕೆ ಸರಿಯಾಗಿ ಹೋಗಿದ್ದ ಸೋನು, ಏಳು ತಾಸು ಒಂದೇ ಕಡೆ ಕಾಯುತ್ತಾ ನಿಂತಿದ್ದರು. ಕುರ್ಚಿ ಇದ್ದರೂ ಕುಳಿತುಕೊಂಡಿರಲಿಲ್ಲ. ಸಂಜೆ ಧ್ವನಿಮುದ್ರಣದ ಕೆಲಸ ಮುಗಿಸಿ ಕದ ತೆರೆದು ಉಷಾ ಖನ್ನಾ ಹೊರಬಂದಾಗ, ಅವರ ಕಣ್ಣಿಗೆ ಸೋನು ಬಿದ್ದರು. ಹಾಗೆ ನಿಂತೇ ಕಾದಿದ್ದ ಹುಡುಗನಿಗೆ ಅವರು ಹಾಡುವ ಅವಕಾಶ ಕೊಟ್ಟರು. ಸೋನು ಅಂದುಕೊಂಡಿದ್ದ ಕಾಲ ಕೂಡಿಬಂದಿದ್ದು ಆಗ. ■